# ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕ

## ನವ ದಂಪತಿ ಸಮಾವೇಶ 14 ಸೆಪ್ಟೆಂಬರ್ 2014




ನಾನು ಎಂಬುದನ್ನು ಮರೆತು ನಾವು ಎಂಬ ಬಾಂಧವ್ಯವನ್ನು ಬೆಸೆಯುವುದು ಮದುವೆ ಎಂದು ಅಖಿಲ ಭಾರತ ಕುಟುಂಬ ಪ್ರಬೋಧನ್ ಪ್ರಮುಖ್ ಸು.ರಾಮಣ್ಣ ನೂತನ ದಂಪತಿಗಳಿಗೆ ಮಾರ್ಗದರ್ಶನ ನೀಡಿದರು. ಅವರು ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದ ವತಿಯಿಂದ ವೇದವ್ಯಾಸ ಮಂಟಪದಲ್ಲಿ ಭಾನುವಾರ ಏರ್ಪಡಿಸಿದ ನವದಂಪತಿಗಳ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಕುಟುಂಬದ ರೀತಿ ರಿವಾಜುಗಳು ಎಲ್ಲರನ್ನು ಒಟ್ಟುಗೂಡಿಸುತ್ತದೆ. ಎಲ್ಲರ ಹಿತದಲ್ಲಿ ನಮ್ಮ ಹಿತ ಅಡಗಿದೆ. ಹೊಸ ಜೀವನ ದೃಷ್ಟಿಯನ್ನು ಮತ್ತು ಜೀವನ ವ್ರತವನ್ನು ಪಾಲಿಸುವ ಕರ್ತವ್ಯ ಪಾಲನೆ ಮದುವೆಯಲ್ಲಿದೆ. ಮದುವೆ ಎಂದರೆ ಒಟ್ಟಿಗೆ ಬಾಳುವುದು ಮಾತ್ರವಲ್ಲ



ಸಮಾಜದ ಅಭಿವೃದ್ಧಿಗೆ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಜೀವನ ಪರ್ಯಂತ ಒಟ್ಟಿಗೆ ಬದುಕುವ ಪವಿತ್ರ ಕರ್ತವ್ಯವಾಗಿದೆ. ಹಿಂದೂ ಧರ್ಮದಲ್ಲಿ ಮದುವೆ ಜೀವನದ ಕೊನೆಯಲ್ಲಿ ಧನ್ಯತಾ ಭಾವನೆಯನ್ನು ಮೂಡಿಸುವಂತೆ ಬದುಕಬೇಕು. ಮಾನ್ಯತೆಗಿಂತ ಧನ್ಯತೆ ಶ್ರೇಷ್ಠವಾದುದು. ಒಳ್ಳೆಯ ಮಕ್ಕಳನ್ನು ಪಡೆದು ಕುಲಕ್ಕೆ ಸಮಾಜಕ್ಕೆ ಅರ್ಪಿಸುವ ಮೂಲಕ ಮಕ್ಕಳು ದೇಶಕ್ಕೆ ಆಸ್ತಿಯಾಗಬೇಕು ಎಂದು ಕುಟುಂಬ ಧರ್ಮದ ಬಗ್ಗೆ ಸು.ರಾಮಣ್ಣ ವಿವರಿಸಿದರು.

ದಕ್ಷಿಣ ಮಧ್ಯಕ್ಷೇತ್ರೀಯ ಸಂಪರ್ಕ ಪ್ರಮುಖ್ ಡಾ। ಪ್ರಭಾಕರ ಭಟ್ ಪ್ರಸ್ತಾವನೆಗೈದು ಗಂಡು ಹೆಣ್ಣು ಮದುವೆಯಲ್ಲಿ ಆಧ್ಯಾತ್ಮಿಕತೆ ಇದೆ. ತನ್ನೊಬ್ಬನ ಬಗ್ಗೆ ಯೋಚನೆ ಮಾಡದೆ ನನ್ನವರ ಬಗ್ಗೆ ಚಿಂತನೆ ಮಾಡುವ ಕುಟುಂಬ ಪದ್ಧತಿ ಮೂಲ ಮದುವೆ. ಧರ್ಮ ಪಾಲನೆಯೊಂದಿಗೆ ಪ್ರಜಾಭಿವೃದ್ಧಿ ಕುಟುಂಬ ಜೀವನದ ಮೂಲಕ ಸಮಾಜಕ್ಕೆ ನೀಡುವುದೇ ಮದುವೆಯ ಉದ್ದೇಶವಾಗಿದೆ. ಎಂದು ಅವರು ಹೇಳಿದರು.

ಆರಂಭದಲ್ಲಿ ಕಾಲು ತೊಳೆದು, ತಿಲಕವಿಟ್ಟು, ಪನ್ನೀರು ಚಿಮುಕಿಸಿ ಮುತ್ತೈದೆಯರು ನೂತನ ವಧೂವರರನ್ನು ಸ್ವಾಗತಿಸಿದರು. ದಂಪತಿಗಳು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿದ ಬಳಿಕ ಆರತಿ ಬೆಳಗಿ ಸಭಾಂಗಣ ಪ್ರವೇಶಿಸಿದರು. ವಿಶೇಷವಾದಂತಹ ಗುತ್ತಿನ ಮನೆಯ ವೇದಿಕೆಯಲ್ಲಿ ಸಂಘದ ಹಿರಿಯರು ಹಾಗೂ ವಿದ್ಯಾಕೇಂದ್ರದ ಅಧ್ಯಕ್ಷ ಬಿ. ನಾರಾಯಣ ಸೋಮಯಾಜಿ ಉಪಸ್ಥಿತರಿದ್ದರು. ಹಿರಿಯ ದಂಪತಿಗಳಾದ ರಘು ಸಪಲ್ಯ ಮತ್ತು ಲಕ್ಷ್ಮೀ ದಂಪತಿಗಳು ತೆಂಗಿನ ಸಿಂಗಾರವನ್ನು ಅರಳಿಸುವ ಮೂಲಕ ಸಮಾವೇಶವನ್ನು ಉದ್ಘಾಟಿಸಿದರು. ನೂತನ ದಂಪತಿಗಳು ಪರಸ್ಪರ ತಮ್ಮನ್ನು ಪರಿಚಯ ಮಾಡಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ವಿಚಾರಗೋಷ್ಠಿಗಳು ನಡೆಯಿತು. ಡಾ। ಪ್ರಭಾಕರ ಭಟ್ ಕಲ್ಲಡ್ಕ ಮತ್ತು ಶ್ರೀಮತಿ ಕಮಲಾ ಪ್ರಭಾಕರ ಭಟ್ ದಾಂಪತ್ಯ ಸುಖೀ ಜೀವನದ ಬಗ್ಗೆ ಮಾರ್ಗದರ್ಶನ ಮಾಡಿದರು. ಮಧ್ಯಾಹ್ನ ಸಾಮೂಹಿಕ ಭೋಜನ, ಸಾಮೂಹಿಕ ಭಾವಚಿತ್ರ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿ ಮದುವೆ ಸಂಭ್ರಮದ ಸೊಗಸಿನೊಂದಿಗೆ ಒಂದು ದಿನ ಪೂರ್ತಿ ನವದಂಪತಿಗಳು ಪಾಲ್ಗೊಂಡರು.









